# ಧನ ಲಾಭ ಇಲ್ಲವೇ ಆತ್ಮತೃಪ್ತಿ!



**ಅರವಿಂದ ರಾವ್**
ಕಲರ್ಸ್ ಕನ್ನಡದ ‘ನಂದಗೋಕುಲ’ ನಂದಕುಮಾರ

◆ **ಯೋಗ ಅಂದರೆ ನಿಮ್ಮ ದೃಷ್ಟಿಯಲ್ಲಿ ಏನು?**

ಯೋಗ ಅಂದರೆ ಹಟ ಸಾಧನೆ. ನಾವು ಅಂದುಕೊಂಡ ಗುರಿಯನ್ನು ಮುಟ್ಟುವ ಮಾರ್ಗ ಎಂದೂ ಅಂದುಕೊಳ್ಳಬಹುದು. ಪ್ರತಿಯೊಬ್ಬರಿಗೂ ಒಂದೊಂದು ಆಸೆ ಇರುತ್ತದೆ. ವಿಧಿ ನಿಯಮವೋ ಏನೋ ಗೊತ್ತಿಲ್ಲ. ಕೆಲವೊಮ್ಮೆ ನಾವು ಆಯ್ಕೆ ಮಾಡಿಕೊಳ್ಳುವುದೇ ಒಂದು, ಆಗುವುದು ಮತ್ತೊಂದು. ಯೋಗ ಅನ್ನೋದು ಅದೃಷ್ಟವೂ ಆಗಬಹುದು. ಆ ಯೋಗ ಇಲ್ಲಿ ನನಗೆ ಕೂಡಿ ಬಂದಿದೆ ಅನ್ನಬಹುದು.

◆ **ಪತ್ರಿಕೋದ್ಯಮ ಬಿಟ್ಟು ತಪ್ಪು ಮಾಡಿದೆ ಎಂದು ಅನ್ನಿಸಿದ್ದು ಇದೆಯಾ?**

ಅತ್ಯಂತ ಖುಷಿ ಕೊಟ್ಟ ಕೆಲಸ ಅಂದರೆ ಬರವಣಿಗೆ. ಅದು ನಿಂತುಹೋಯ್ತು ಎನ್ನುವ ಕೊರಗು ತುಂಬ ದಿನ ಕಾಡಿದೆ. ಇಂದಿನ ವಿದ್ಯಮಾನಗಳನ್ನು ನೋಡಿದಾಗ ಇನ್ನೂ ಸಂಕಟ ಅನ್ನಿಸುತ್ತದೆ. ನಾನೊಂದು ಪತ್ರಿಕೆ ನಡೆಸುತ್ತಿದ್ದವನು, ಸಮಕಾಲೀನ ಘಟನೆಗೆ ಸ್ಪಂದಿಸಲಾಗದೆ ಕೈ ಚೆಲ್ಲಿ ಕುಳಿತುಕೊಂಡಿದ್ದೇನೆ ಎಂದು ಅನ್ನಿಸುತ್ತೆ. ನಾನೊಬ್ಬ ನಟನಾಗಿ ಬದಲಾದಾಗ ಎರಡು ದೋಣಿಯಲ್ಲಿ ಕಾಲಿಡಲು ಆಗುವುದಿಲ್ಲ ಎಂದು ನಟನೆಯನ್ನೇ ಆಯ್ಕೆ ಮಾಡಿಕೊಂಡೆ. ಬಲವಂತದಿಂದ ಪತ್ರಿಕೋದ್ಯಮವನ್ನು ಬಿಡಬೇಕಾಯಿತು. ಆ ನೋವು ಈಗಲೂ ಇದೆ.

◆ **ಇಂತಹ ಪಾತ್ರವನ್ನು ಇನ್ನೂ ಮಾಡಿಲ್ಲ ಎಂದು ಅನ್ನಿಸಿದ್ದು ಇದೆಯಾ?**

ಕಾಡಿದೆ. ಬಹುಶಃ ನನ್ನ ಲುಕ್ಸ್ ನನಗೆ ಮುಳುವಾಗಿದೆ. ನನಗೆ ಪೊಲೀಸ್, ಲಾಯರ್, ಡಾಕ್ಟರ್, ಖಳನಾಯಕ ರೀತಿಯ ಪಾತ್ರಗಳು ಚಂದ ಅನ್ನುತ್ತಾರೆ. ನಟ ಹೇಗೇ ಇದ್ದರೂ ಮೇಕ್ ಓವರ್ ಮಾಡಿ ಕಲಾವಿದನನ್ನು ರೂಪಾಂತರ ಮಾಡುವುದು ನಿರ್ದೇಶಕರ ಕೈಚಳಕ. ಆದರೆ ಬಹುತೇಕ ಸಿದ್ಧ ಮಾದರಿಯನ್ನೇ ಅನುಸರಿಸುತ್ತಾರೆ. ನನಗೆ ಬಡವ, ಭಿಕ್ಷುಕ, ನಿರ್ಗತಿಕ, ಆಟೊ ಡ್ರೈವರ್, ಬಸ್ ಕಂಡಕ್ಟರ್ ರೀತಿಯ ಪಾತ್ರಗಳನ್ನು ಮಾಡುವ ಬಯಕೆ ಇದೆ. ‘ನಂದಗೋಕುಲ’ದಲ್ಲಿ ಮಧ್ಯಮ ಕುಟುಂಬದವನು. ಪಂಚೆ, ಸಡಿಲವಾದ ಅಂಗಿ ತೊಡಬೇಕು. ನನಗೆ ಅಪ್ಪನ ಪಾತ್ರ ಕೊಡುವಾಗಲೂ ಯೋಚನೆ ಮಾಡುತ್ತಾರೆ.

◆ **ಖಳನಾಯಕನ ಪಾತ್ರ ನೀವು ಹುಡುಕುತ್ತೀರೋ ಅಥವಾ ಅದೇ ನಿಮ್ಮನ್ನು ಹುಡುಕುತ್ತೋ?**

ಅದಕ್ಕೆ ಕಾರಣ ನನ್ನ ಕಣ್ಣು, ಬೆಕ್ಕಿನ ಕಣ್ಣಿನ ತೀಕ್ಷ್ಣ ನೋಟ ಅದಕ್ಕೆ ಪ್ಲಸ್ ಪಾಯಿಂಟ್ ಆಗಿದೆ. ಅದರ ಜೊತೆ, ಧ್ವನಿ. ಇವೆರಡು ಬೆಂಕಿಗೆ ತುಪ್ಪ ಹಾಕಿದಂತೆ ಆಗುತ್ತದೆ. ನಾನಂತೂ ಹುಡುಕಿಕೊಂಡು ಹೋಗುವುದಿಲ್ಲ.

◆ **ನಟನೆ ನಿಮ್ಮನ್ನು ಹೇಗೆ ಸೆಳೆಯಿತು?**

ರಾಜ್‌ಕುಮಾರ್ ಅವರ ‘ವೀರಕೇಸರಿ’ ನಿರ್ದೇಶನ ಮಾಡಿದ್ದ ಬಿ. ವಿಠ್ಠಲಾಚಾರ್ಯ ನನ್ನ ಮಾವ. ಕಲಾವಿದರಾದ ಹರಿಣಿ, ವಾದಿರಾಜ ನನಗೆ ಸಂಬಂಧಿಗಳು. ಸಿನಿಮಾ ರಂಗದ ಪರಿಚಯ ಇದ್ದರೂ ಕಲಾವಿದ ಆಗಬೇಕು ಎಂದು ಬಯಸಿದವನಲ್ಲ. ಶಾಲಾ–ಕಾಲೇಜುಗಳಲ್ಲಿ ಒಮ್ಮೆಯೂ ವೇದಿಕೆ ಹತ್ತಿರಲಿಲ್ಲ. ನಾಚಿಕೆಯ ಸ್ವಭಾವ ನನ್ನದಾಗಿತ್ತು. ಪತ್ರಿಕೋದ್ಯಮ ಓದಿ ಪತ್ರಕರ್ತನಾದ ಮೇಲೆ ನನಗೆ ಧೈರ್ಯ ಬಂತು. ಪ್ರಶ್ನಿಸುವ ಮನೋಭಾವ ಅಗೋಚರ ಶಕ್ತಿಯನ್ನು ತುಂಬಿತು. ಪೊಲೀಸ್ ಒಡನಾಟವು ಚೆನ್ನಾಗಿ ಬೆಳೆಯಿತು. ಅದೇ ಸಮಯದಲ್ಲಿ ಕ್ರೈಂನ್ಯೂಸ್‌ನಲ್ಲಿ ಒಂದು ಅಪರಾಧ ಕೃತ್ಯಕ್ಕೆ ಕ್ಯಾಮೆರಾ ಎದುರಿಸಿದೆ. ಅದಾದ ಮೇಲೆ, ಎಂ.ಕೆ. ಮಠ ಅವರು ನನ್ನನ್ನು ಕರೆದು ‘ಮಹಾಮಾಯಿ’ಯಲ್ಲಿ ಒಂದು ಪಾತ್ರವನ್ನು ಕೊಡುತ್ತಾರೆ. ಅಲ್ಲಿಂದ ನನ್ನ ಬಣ್ಣದ ಪಯಣ ಆರಂಭವಾಯಿತು. ಆಗ ಅಭಿನಯದ ಬಗ್ಗೆ ಏನೂ ಗೊತ್ತಿರಲಿಲ್ಲ. ‘ಮಹಾಮಾಯಿ’ ನಂತರ ‘ಮುಕ್ತ’, ‘ಅಪ್ಪ’, ‘ರಾಧಾ’ದಲ್ಲಿ ಮಾಡಿದೆ. ಅಲ್ಲಿಂದ ಐವತ್ತು ಧಾರಾವಾಹಿಗಳನ್ನು ಮಾಡಿದೆ. ಏಕತಾನತೆಯ ಕಾರಣಕ್ಕೆ ಸಿನಿಮಾ ಕಡೆ ಮುಖ ಮಾಡಿದೆ. ಅಲ್ಲೂ 75 ಪಾತ್ರಗಳನ್ನು ನಿರ್ವಹಿಸಿದ್ದೇನೆ. ‘ರಂಗಿತರಂಗ’ ಒಳ್ಳೆಯ ಹೆಸರು ತಂದುಕೊಟ್ಟಿತು. ಪಯಣ ಸಾಗುತ್ತಿರುವಾಗ ಏರುಪೇರು ಸಹಜ. ಒಳ್ಳೆಯ ಪಾತ್ರ ಇರುತ್ತೆ. ಕೆಲವೊಂದರಲ್ಲಿ ಒಳ್ಳೆಯ ದುಡ್ಡು ಇರುತ್ತೆ. ಹೀಗಿರುವಾಗ ದುಡ್ಡು ಬರದಿದ್ದರೂ ಪಾತ್ರ ಚೆನ್ನಾಗಿರಬೇಕು. ಪಾತ್ರ ಚೆನ್ನಾಗಿರದಿದ್ದರೂ ದುಡ್ಡು ಬರಬೇಕು ಎನ್ನುವ ನಿರ್ಧಾರಕ್ಕೆ ಬಂದೆ. ಬಣ್ಣ ಹಚ್ಚಿದರೆ ಧನ ಲಾಭ ಆಗಬೇಕು ಇಲ್ಲ ಆತ್ಮ ತೃಪ್ತಿಯಾಗಬೇಕು. ನನ್ನ ಈ ಪಾತ್ರಕ್ಕೆ ಅವಕಾಶ ಬಂದಾಗ ನಿರಾಕರಿಸಿದ್ದೆ. ಅನಿವಾರ್ಯವಾಗಿ ಒಪ್ಪಿ ಮಾಡುತ್ತಿದ್ದೇನೆ.

◆ **ಧಾರಾವಾಹಿಯ ಶೀರ್ಷಿಕೆಯೇ ಪುನರಾವರ್ತನೆ...**

ಸಿನಿಮಾ, ಸೀರಿಯಲ್‌ಗಳಿಗೆ ಇದೇನೂ ಹೊಸತಲ್ಲ. ಯಶಸ್ವಿ ಹೆಸರುಗಳ ಪುನರ್‌ಬಳಕೆ ಆಗುತ್ತಲೇ ಇರುತ್ತದೆ. ‘ನಂದಗೋಕುಲ’ ಒಂದಾದ ಮೇಲೆ ಭಾಗ 2 ಅಂದುಕೊಳ್ಳಬಹುದು. ಹಳೆ ಸಿನಿಮಾಗಳ ಹೆಸರನ್ನು ಬಳಸುತ್ತಾರೆ. ಏಕೆಂದರೆ ಜನರ ಮನಸ್ಸು ಮುಟ್ಟಲು ಸುಲಭ ಆಗುತ್ತದೆ. ಅವತ್ತು ‘ನಂದಗೋಕುಲ’ ನೋಡಿದ ವೀಕ್ಷಕರು ಬೇರೆ, ಈಗ ನೋಡುತ್ತಿರುವ ವರ್ಗವೇ ಬೇರೆ. ಇದು ಕೂಡು ಕುಟುಂಬದ ಕಥೆಯನ್ನು ಆಧರಿಸಿ ಮಾಡಿದ್ದಾರೆ. ಈ ಹೆಸರು ಯಶ್ ಅವರ ಹಿಟ್ ಧಾರಾವಾಹಿ ಅನ್ನುವುದಕ್ಕಿಂತ ಕಥೆಗೆ ತುಂಬ ಪೂರಕ ಅನ್ನುವ ಕಾರಣಕ್ಕೆ ಈ ಹೆಸರು ಇಟ್ಟಿದ್ದಾರೆ. ನಂದಕುಮಾರ್ ಕೂಡು ಕುಟುಂಬಕ್ಕೆ ಮಾದರಿಯಂತೆ ಇದ್ದಾನೆ.

■ **ರಾಘವೇಂದ್ರ ಕೆ.**